ದಿ.09.12.2019. O S 76/2011 DW-1

ದಿ.09.12.2019 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಡಿ ಎನ್ ಎನ್ ವಕೀಲರಿಂದಃ-

ಮೇಲೆ ಹೇಳಿದ ದಾನ ಪತ್ರಕ್ಕೆ ನನ್ನ ತಂದೆ ಸಹಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ ದಿ.04.02.1963 ರ ದಾನ ಪತ್ರದ ಧೃಢೀಕೃತ ಪ್ರತಿಯನ್ನು ತೋರಿಸಿ ನಿಮ್ಮ ತಂದೆ ಮತ್ತು ಚಿಕ್ಕಪಂದಿರು ಆಸ್ಪತ್ರೆಗೆ ದಾನ ಮಾಡಿದ ಪತ್ರ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಮೂತ್ರ ಮೂಲಕ ಒಟ್ಟು 4 ಎಕರೆ ದಾನ ಕೊಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ದಾಖಲಾತಿಯಲ್ಲಿ ನಮೂದು ಮಾಡಿರುವ ಎಮ್ ಚನ್ನೇಗೌಡ ಎಂದರೆ ನನ್ನ ತಂದೆ ಎಂದರೆ ಸರಿ. ದಾನ ಪತ್ರವನ್ನು ಸಾಕ್ಷಿಗೆ ತೋರಿಸಲಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ-1 ರಲ್ಲಿ ಕಾಣಿಸಲಾಗಿರುವ ಚನ್ನಂಕೇಗೌಡ ಏನಾಗಬೇಕು ಎಂದರೆ ಸಾಕ್ಷಿ ನನ್ನ ತಾತನ ಅಣ್ಣ ತಮ್ಮಂದಿರಾಗಬೇಕು ಎಂದು ನುಡಿಯುತ್ತಾರೆ. ಚನ್ನಂಕೇಗೌಡ ನಿಮ್ಮ ತಾತನ ತಮ್ಮನ ಮಗ ಎಂದರೆ ಸರಿ. ನಿಡಿ-1 ರಲ್ಲಿ 6 ಎಕರೆ 4 ಗುಂಟೆಯಲ್ಲಿ ಮೂರು ಗುಂಟೆ ಕರಾಬು ಹೋಗಿ 6 ಎಕರೆ 1 ಗುಂಟೆ ಯನ್ನುತೋರಿಸಲಾಗಿದೆ ಎಂದರೆ ಸರಿ.

ನಿಡಿ-13 ರ ಪ್ರಕಾರ 4 ಜನರಿಗೆ ಸಮಭಾಗ ಇದೆ ಎಂದರೆ ಸರಿ. ಆ 4 ಜನರು ನನ್ನ ತಂದೆ ಮತ್ತು ಚಿಕ್ಕಪಂದಿರು ಎಂದರೆ ಸರಿ.

ದಾವಾ ಆಸ್ತಿಯ ಅರ್ ಟಿ ಸಿ 1984-85 ರಲ್ಲಿ ಚನ್ನೇಗೌಡರ ಹೆಸರನಲ್ಲಿ ಇತ್ತು ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ಅರ್ ಟಿ ಸಿಯನ್ನು ಸಾಕ್ಷಿಗೆ ತೋರಿಸಲಾಗಿ ಗುರುತಿಸುತ್ತಾರೆ, ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಪಿ-5 ರಲ್ಲಿ ಚನ್ನೇಗೌಡರ ಹೆಸರಿನ ಮುಂದೆ 30 ಎಂದು ತಿದ್ದಿ ಬರೆಯಲಾಗಿದೆ ಎಂದರೆ ಸಾಕ್ಷಿ ನನಗೆ ಕಾಣುತ್ತಿಲ್ಲ ಎಂದು

ನುಡಿಯುತ್ತಾರೆ.

ಈಗಲೂ ಕೂಡ ವಾದಿಗಳು ದಾವಾ ಆಸ್ತಿಯ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಧ್ಯವಾದರೆ ವಾದಿಗಳಿಗೆ ಮೋಸ ಮಾಡಬೇಕು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳಿಗೆ ಭಾಗಂಶ ಇರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಎಲ್ಲ ವಿಚಾರ ತಿಳಿದುಕೊಂಡಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಎನು ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**